g.h.s.begur bangaluru-68

## ಪ್ರಶ್ನೆಪತ್ರಿಕೆ -೨ ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ ಅಂಕಗಳು : ೧೦೦

### ಭಾಗ -'ಎ'

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೯*೧ =೯

೧. ಶಬರಿ ವಾಸವಾಗಿದ್ದ ಆಶ್ರಮ ಯಾರದು?

೨.ಶ್ರೀವೈಷ್ಣವರಿಗೆ ಮಹಾರಾಜನು ಏನು ಹೇಳಿದನು ?

೩. ತಾಯಿ ಮನೆಮಂಚಮ್ಮ ಎಲ್ಲಿ ಪೂಜಿತಳಾಗುತ್ತಿದ್ದಾಳೆ ?

೪. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

೫. ಧರ್ಮಾಧಿಕಾರಣರ ವಿಸ್ಮಯಕ್ಕೆ ಕಾರಣ ಯಾವುದು ?

೬. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?

೭.ಹಲಗಲಿ ಬೇಡರ ದಂಗೆಯ ನಾಯಕತ್ವ ವಹಿಸಿದ ನಾಲ್ವರ ಪ್ರಮುಖರ ಹೆಸರು ಬರೆಯಿರಿ.

೮. ಯಾವ ಮತ್ತಿನಲಿ ಮಾನವ ಗೆರೆ ಎಳೆದು ಗಡಿ ರೂಪಿಸಿಕೊಂಡಿದ್ದಾನೆ ?

೯. ಮುದ್ದು ಪಾರಿವಾಳಗಳ ಆನಂದದ ಕಾರಣವೇನು ?

ಈ ಕೆಳಗಿನವುಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೦*೨=೨=

೧೦.ರಾಮಾನುಜಾಚಾರ್ಯರ ವಿಶೇಷತೆ ಬುಕ್ಕರಾಯನ ಶಾಸನದಲ್ಲಿ ಹೇಗೆ ವ್ಯಕ್ತವಾಗಿದೆ ?

೧೧. 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ಏನು ?

೧೨. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನು ಹೇಳಿದನು ?

೧೩. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಬೋಗರ ಮನದಲ್ಲಿ ಯಾವ ಯೋಚನೆ ಮೂಡಿತು ?

೧೪. ಹಲಗಲಿಗೆ ದಂಡು ಬರಲು ಕಾರಣವೇನು ?

೧೫. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?

೧೬. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಎಚ್ .ನರಸಿಂಹಯ್ಯ ಹೇಳಿದ್ದಾರೆ ?

೧೭. ಲೇಖಕಿ ಆರ್ ನಿರ್ಮಲ ತನ್ನ ಹೆಸರಿನ ನಾಮಫಲಕ ಇಂಥದ್ದಿರಬೇಕೆಂದು ಆಸೆ ಪಡದಿರಲು ಕಾರಣಗಳೇನು ?

೧೮. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

೧೯.ಕೊಕ್ಕರೆಯ ಕುರಿತು ಇರುವ ಒಗಟನ್ನು ವಿವರಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨

೨೦.'' ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ. ''

೨೧. ''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ''

೨೨. ''ಸಾರ್ವಭೌಮರಾ ನೆತ್ತಿಯ ಕುಕ್ಕಿ ''

mamatabhagwat1@gmail.com

**೧೩. ''ಅರಸುಗಳ ವಾಜಿಯಂ ಬಿಡು ''**

**ಈ ಸಾಹಿತಿ /ಕವಿಗಳ ಸ್ಥಳ ,ಕಾಲ,ಕೃತಿ ,ಪ್ರಶಸ್ತಿ /ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೨*೩=೬**

**೧೪. ಪು.ತಿ.ನ.**

**೧೫. ಜೇಡರ ದಾಸಿಮಯ್ಯ**

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ. ೧*೪=೪**

**ನೀನುಳ್ಳೊಡೆ -------------------**

**--------------------------------**

**------------------------------**

**----------------ನಂದಿದೊಡೇಂ**

**ಅಥವಾ**

**ಕುರುಕುಲ -----------------------**

**------------------------------------**

**----------------------------------**

**----------------------ಬಗೆ ತಂದೆಗಿಂಬುಕೆಯ್**

**ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು , ಆಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

**೧*೪=೪**

**೧೭. ಮರುಳು ಮಾಧವ ಮಹಿಯ ರಾಜ್ಯದ**
**ಸಿರಿಗೆ ಸೋಲುವನಲ್ಲ ಕೌಂತೇ**
**ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ**
**ಹೊರೆದ ದಾತಾರಂಗೆ ಹಗೆವರ**
**ಶಿರವನರಿದೊಪ್ಪಿಸುವೆನೆಂಬೀ**
**ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ||**

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮**

**೧೮. ಅಮೆರಿಕದ ವಿದ್ಯಾರ್ಥಿಗಳ ಭಯ ಕುತೂಹಲಕ್ಕೆ ಕಾರಣವಾದ ಗೊರೂರರ ವೇಷಭೂಷಣಗಳು ಹೇಗಿದ್ದವು ?**

**ಅಥವಾ**

**ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ?**

೨೯. ಯಾಯ ರೀತಿಯ ಸಂಕಲ್ಪ ನಮ್ಮದಾಗಿರಬೇಕೆಂದು ಕವಿ ಜಿ.ಎಸ್.ಶಿವರುದ್ರಪ್ಪನವರು ಆಶಿಸಿದ್ದಾರೆ ?
ಅಥವಾ
ಸಂಕಲ್ಪ ಮತ್ತು ಅದನ್ನು ಅನುಷ್ಠಾನಗೊಳಿಸುವ ಕುರಿತಾದ ಕವಿ ಜಿ.ಎಸ್.ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧*೪ =೪(೨+೨)

೩೦. ಭಗವಂತನಲ್ಲಿಡುವ ದೃಢಶ್ರದ್ಧೆಯು , ಆತ್ಮಶ್ರದ್ಧೆಗೂ,ಸತ್ಕರ್ಮದಿಂದಲೇ ಶ್ರೇಯಸ್ಸು,ಯಶಸ್ಸು,ವಿಜಯ ಎನ್ನುವ ಶ್ರದ್ಧೆಗೂ ಕಾರಣವಾಗುವುದು.ಶ್ರದ್ಧೆಯ ಮಹಿಮೆಯನ್ನು ಆಧ್ಯಾತ್ಮವಾದಿಯೂ ಕೊಂಡಾಡುತ್ತಾನೆ.ವಿಜ್ಞಾನಿಯೂ ಕೊಂಡಾಡುತ್ತಾನೆ.

ಶ್ರದ್ಧೆಯೇ ಜೀವನ.ಶ್ರದ್ಧೆಯಿಂದಲೇ ಜೀವನ ಸಾರ್ಥಕ್ಯ.ಶ್ರದ್ಧೆಯೇ ಜೀವನದ ತಳಹದಿ, ಶ್ರದ್ದೆಯೇ ಆಧ್ಯಾತ್ಮಿಕ ಸೌಧದ ಅಡಿಪಾಯ,ಶ್ರದ್ಧೆಯೇ ಆತನ ಕೃಪೆ ಪಡೆಯಲು ಇರುವ ದಿವ್ಯ ಸಾಧನ,ಶ್ರದ್ಧೆಯಿಂದ ಎಲ್ಲವೂ ಸಾಧ್ಯ . ಶ್ರದ್ಧೆಯಿದ್ದಲ್ಲಿ ಆತನಿದ್ದಾನೆ . ಆತನ ದರ್ಶನ ಪಡೆಯಲು ಶ್ರದ್ಧೆ ಬೇಕು.ಇಂತಹ ಅಮೂಲ್ಯವಾದ ಶ್ರದ್ಧೆ ಎಲ್ಲರ ಪಾಲಿಗೆ ಒಂದೇ ದಿನದಲ್ಲಿ ದೊರಕುವುದೇ ?

ಅದಕ್ಕಾಗಿ ನಿದ್ದೆ ತೊರೆದು ,ಎದ್ದುಬಿದ್ದು ,ಆತನನ್ನು ಸ್ಮರಿಸುತ್ತ ,ವಿದ್ಯೆ ,ವಿನಯಗಳನ್ನುಳಿಸಿಕೊಂಡು ,ಆ ದಾರಿಯಲ್ಲಿ ಸಾಗಿದಾಗ ಶ್ರದ್ಧೆ ಮೈಗೂಡುವುದು. ಈಜಲು ಕಲಿಯಲು ನೀರಿಗಿಳಿಯಲೇ ಬೇಕು . ಹಾಗೆಯೇ ಶ್ರದ್ಧೆ ಮೈಗೂಡಲು ಪ್ರಯತ್ನವೆಂಬ ಸಮುದ್ರಕ್ಕಿಳಿಯಲೇ ಬೇಕು.ಮೊದಲು ಈಜು ಕಲಿಯುವಾತ ಅಂಜುತ್ತಾನೆ ಅಥವಾ ಒಂದೆರಡು ಬಾರಿ ವಿಫಲನಾಗುತ್ತಾನೆ. ಹಾಗೆಂದು ಅವನು ಈಜುವ ಪ್ರಯತ್ನವನ್ನು ಬಿಟ್ಟುಬಿಟ್ಟರೆ ಹೇಗೆ ? ಹಾಗೆಯೇ ಆಧ್ಯಾತ್ಮಿಕ ರಾಜ್ಯದಲ್ಲಿ ಪ್ರಯತ್ನ ಅತ್ಯಾವಶ್ಯಕ .ಎಷ್ಟು ಬಾರಿ ವಿಫಲರಾದರೂ ಮತ್ತೂ ಬಿಡದೇ ಪ್ರಯತ್ನ ಮುಂದುವರಿಸಬೇಕು. ಈಜು ಕಲಿಯುವ ಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದವ ಕೊಳದಲ್ಲಿ ಈಜಬಲ್ಲ. ಆದರೆ ಅವನು ಸಮುದ್ರದಲ್ಲಿ ಈಜುವ ಸಾಹಸ ಮಾಡಲಾರ. ಈ ದಿಸೆಯಲ್ಲಿ ಅವನಿಗೆ ಇನ್ನೂ ಹೆಚ್ಚಿನ ತರಬೇತಿ ಬೇಕು. ಹಾಗೆಯೇ ಅಲ್ಪ ಶ್ರದ್ಧಾನ್ವಿತರಿಂದ ಅಲ್ಪಸ್ವಲ್ಪ ಕಾರ್ಯ ಸಾಧ್ಯ ಆದರೆ ಮಹತ್ಕಾರ್ಯ ಆಗದು. ಅದಕ್ಕೆ ಪೂರ್ಣ ಶ್ರದ್ಧೆ ಮೈಗೂಡಿಸಿಕೊಂಡವರೇ ಬೇಕು.ಈ ನಿಟ್ಟಿನಲ್ಲಿ ನಾವು ಗುರಿ ಸೇರುವವರೆಗೂ ವಿಶ್ರಮಿಸದೆ ಮುನ್ನಡೆಯುವ ಛಲ ಬೆಳೆಸಿಕೊಳ್ಳಬೇಕು.

ಪ್ರಶ್ನೆಗಳು :
೧. ಶ್ರದ್ಧೆಯ ಮಹತ್ವ ವಿವರಿಸಿ
೨.ಶ್ರದ್ಧೆಯನ್ನು ರೂಢಿಸಿಕೊಳ್ಳುವುದು ಹೇಗೆ ಸಾಧ್ಯ?

ಭಾಗ - 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦*೧=೧೦

**೩೧. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ:**

**(ಎ) ೯ (ಬಿ) ೫ (ಸಿ) ೧೦ (ಡಿ)೨೫**

**೩೨. ' ಸೊದೆ' ಪದದ ತತ್ಸಮ ರೂಪವಿದು : .**

**(ಎ) ಸೊಗ (ಬಿ)ಸುಧಾ (ಸಿ)ಸುಧೆ (ಡಿ) ಸೊಬಗು**

**೩೩. ಪಾರಿಭಾಷಿಕ ಪದಗಳನ್ನು ಬಳಸುವಾಗ ,ಅನ್ಯಭಾಷೆಯ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.**

**(ಎ) ಭಾವಸೂಚಕ (ಬಿ) ಪ್ರಶ್ನಾರ್ಥಕ (ಸಿ)ಅರ್ಧವಿರಾಮ (ಡಿ)ವಾಕ್ಯವೇಷ್ಟನ**

**೩೪. ಕೆಳಗಿನವುಗಳಲ್ಲಿ ಕರ್ಮಕಾರಕ ವಿಭಕ್ತಿಯಿದು :**

**(ಎ) ದ್ವಿತೀಯಾ (ಬಿ)ತೃತೀಯಾ (ಸಿ) ಸಪ್ತಮಿ (ಡಿ) ಪ್ರಥಮಾ**

**೩೫.'ಹುಲಿಯ ಮುಖ ಪೆಚ್ಚಾಯಿತು ' ಈ ವಾಕ್ಯವು ವಾಕ್ಯದ ಈ ಪ್ರಕಾರದ ಉದಾಹರಣೆಯಾಗಿದೆ .**

**(ಎ) ಸಂಯೋಜಿತ (ಬಿ)ನಿಷೇಧಾರ್ಥಕ (ಸಿ)ಸಾಮಾನ್ಯ (ಡಿ)ಮಿಶ್ರ**

**೩೬. ಇವುಗಳಲ್ಲಿ ಅನ್ವರ್ಥಕ ನಾಮಪದ :**

**(ಎ) ನೆಲ (ಬಿ)ನೀರು (ಸಿ)ಮಹೇಶ (ಡಿ) ವ್ಯಾಪಾರಿ**

**೩೭. 'ಗುಜುಗುಜು ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.**

**(ಎ) ದ್ವಿರುಕ್ತಿ (ಬಿ)ಅನುಕರಣಾವ್ಯಯ (ಸಿ)ಜೋಡುನುಡಿ (ಡಿ)ನುಡಿಗಟ್ಟು**

**೩೮. ಕೆಳಗಿನ ಪದಗಳಲ್ಲಿ ತದ್ಧಿತಾಂತ ಭಾವನಾಮಕ್ಕೆ ಉದಾಹರಣೆಯಾದ ಪದ :**

**(ಎ) ಕನ್ನಡಿಗ (ಬಿ) ಸಿರಿವಂತೆ (ಸಿ)ಸಿರಿವಂತಿಕೆ (ಡಿ) ಬಳೆಗಾರ**

**೩೯. ಅಜಮಾಯಿಷಿ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ :**

**(ಎ) ಉರ್ದು (ಬಿ) ಪರ್ಷಿಯನ್ (ಸಿ) ಹಿಂದೂಸ್ಥಾನಿ (ಡಿ)ಪೋರ್ಚುಗೀಸ್**

**೪೦. ಇವುಗಳಲ್ಲಿ ಪರಿಮಾಣವಾಚಕ ಪದ :**

**(ಎ)ದೊಡ್ಡದು (ಬಿ)ಹತ್ತನೆಯ (ಸಿ)ಅಷ್ಟು (ಡಿ) ಐವತ್ತು**

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.**

**೪೧. ಜಿನಾಲಯ :ಸವರ್ಣದೀರ್ಘಸಂಧಿ : ಶ್ರೀಮನ್ಮಹಾ : ___**

**೪೨. ಇಮ್ಮಡಿ :ದ್ವಿಗುಸಮಾಸ :: ಕುಲಧರ್ಮ :_______**

**೪೩.ಓಡಿದ :ಕೃದಂತನಾಮ :: ಓಡಿ :_______**

೪೪:ಹಣ್ಣುಹಂಪಲು : ಜೋಡುನುಡಿ :: ಬೇಗಬೇಗ :------

೪೫ .ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೩ =೩

ಎತ್ತಣ ತುರಂಗಮಿದು ಪೊಕ್ಕುಪೂದೋಟಮಂ

ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ

ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಫಂ ಕರೆಸಲಾಗಿ

ಅಥವಾ

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

೪೬. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣಬರೆದು ಸಮನ್ವಯಿಸಿ . ೧*೩ =೩

'ಜೀವನ ರಥ '

ಅಥವಾ

'ಮರವನಾಶ್ರಯಿಸಿ ಬೆಳೆದ ಬಳ್ಳಿಯಂತೆ'

ಭಾಗ -'ಸಿ'

೪೭. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.

* ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ.
* ಒಗ್ಗಟ್ಟಿನಲ್ಲಿ ಬಲವಿದೆ
* ಮಾತು ಬೆಳ್ಳಿ;ಮೌನ ಬಂಗಾರ

೪೮. ನಿಮ್ಮನ್ನು ಬೀದರದ ಸರ್ಕಾರಿ ಪ್ರೌಢಶಾಲೆಯ 'ಪೃಥ್ವಿ' ಎಂದು ಭಾವಿಸಿಕೊಂಡು ,ನಿಮ್ಮ ಶಾಲೆಯಲ್ಲಿ ಆಚರಿಸಿದ ಶಿಕ್ಷಕ ದಿನಾಚರಣೆ ಕಾರ್ಯಕ್ರಮದ ಕುರಿತು ಮೈಸೂರಿನಲ್ಲಿ ವಾಸವಾಗಿರುವ ನಿಮ್ಮ ಗೆಳೆಯ ಮನೋಜನಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ನಾಗರಬಾವಿ ಸರ್ಕಾರಿ ಪ್ರೌಢಶಾಲೆಯಲ್ಲಿ ೧೦ ನೇ ತರಗತಿಯಲ್ಲಿ ಓದುತ್ತಿರುವ 'ಸುದೀಪ್ ' ಎಂದು ಭಾವಿಸಿ ಪಕ್ಕದ ಊರಿನ ಜಾತ್ರೆಗೆ ಹೋಗುವ ಸಲುವಾಗಿ ಒಂದು ದಿನ ರಜೆ ಕೊಡುವಂತೆ ಕೋರಿ ನಿಮ್ಮ ವರ್ಗದ ಶಿಕ್ಷಕರಿಗೆ ಪತ್ರ ಬರೆಯಿರಿ.

೪೯. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

* ವಿಜ್ಞಾನದ ಪ್ರಯೋಜನಗಳು

**g.h.s.begur bangaluru-68**

*** ಸಮೂಹಮಾಧ್ಯಮಗಳು**

*** ಪರಿಸರ ಸಂರಕ್ಷಣೆ**

**mamatabhagwat1@gmail.com**